# ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು

(ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು)
ಬಿ.ಹೆಚ್.ರಸ್ತೆ, ತುಮಕೂರು. ದೂರವಾಣಿ: 0816 2272027

ಸಂ.ವಿವಿಕಕಾತು: 2024-25/512 ದಿನಾಂಕ: 18.02.2025

## ದರಪಟ್ಟಿ ಆಹ್ವಾನ

**ವಿಷಯ:** ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಗ್ರಂಥಾಲಯ ವಿಭಾಗದಲ್ಲಿರುವ ಹಳೆಯ ದಿನಪತ್ರಿಕೆಗಳು, ವಾರ-ಮಾಸ ಪತ್ರಿಕೆಗಳು ಹಾಗೂ ಹಳೆಯ ಪುಸ್ತಕಗಳ ವಿಲೇವಾರಿ ಮಾಡುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ವಿವಿಧ ವಿಭಾಗಗಳಲ್ಲಿ ಆಂತರಿಕ ಪರೀಕ್ಷಾ ಪುಸ್ತಕಗಳು, ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿನ ಹಳೆಯ ದಿನಪತ್ರಿಕೆಗಳು, ವಾರ-ಮಾಸ ಪತ್ರಿಕೆಗಳು ಹಾಗೂ ಹಳೆಯ ಪುಸ್ತಕಗಳ ಪ್ರಮಾಣ ಹೆಚ್ಚಾಗಿದ್ದು, ಎರಡು-ಮೂರು ವರ್ಷದ ಹಳೆಯದ್ದಾಗಿರುತ್ತವೆ. ಸದರಿ ದಿನಪತ್ರಿಕೆಗಳನ್ನು ವಿಲೇಮಾಡುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸಲಾಗಿದೆ:

| ಕ್ರ. ಸಂ. | ವಿವರ | ಪ್ರತೀ ಕೆ.ಜಿ. ಗೆ ದರ ನಮೂದಿಸುವುದು |
|---|---|---|
| 1. | ಹಳೆಯ ದಿನಪತ್ರಿಕೆಗಳು | |
| 2. | ವಾರ-ಮಾಸ ಪತ್ರಿಕೆಗಳು | |
| 3. | ಹಳೆಯ ಪುಸ್ತಕಗಳು | |
| 4. | ವಿಭಾಗಗಳಲ್ಲಿನ ಆಂತರಿಕ ಪರೀಕ್ಷಾ ಪುಸ್ತಕಗಳು | |

**ಷರತ್ತುಗಳು:**

1. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 11.03.2025 ಸಂಜೆ 4:00 ಗಂಟೆಯವರೆಗೆ
2. ದರಪಟ್ಟಿಯನ್ನು ದಿನಾಂಕ: 12.03.2025 ಮಧ್ಯಾಹ 12:00 ಗಂಟೆಗೆ ತೆರೆಯಲಾಗುವುದು.
3. ದರಪಟ್ಟಿಯನ್ನು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ಇವರ ಹೆಸರಿಗೆ ಕಡ್ಡಾಯವಾಗಿ ಅಂಚೆಯ ಮೂಲಕ ಅಥವಾ ಖುದ್ದಾಗಿ ತಲುಪಿಸತಕ್ಕದ್ದು, ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಜವಾಬ್ದಾರಿಯಾಗುವುದಿಲ್ಲ.
4. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ಕಾಯ್ದಿರಿಸಿಕೊಂಡಿದೆ.
5. ಕಾರ್ಯಾದೇಶವನ್ನು ಪಡೆಯುವವರು ವಿಲೇವಾರಿ ಮಾಡುವ ದಿನದಂದೇ ಪೂರ್ಣ ಮೊತ್ತವನ್ನು ಪ್ರಾಂಶುಪಾಲರ ಹೆಸರಿಗೆ ಧನಾದೇಶ / ಡಿಡಿ ನೀಡತಕ್ಕದ್ದು.
6. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಲಾ ಕಾಲೇಜು
ತುಮಕೂರು-572 103

**ಪ್ರತಿಗಳು:**

1. ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ವೆಬ್‌ಸೈಟ್ ನಿರ್ವಾಹಕರು – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಕಚೇರಿ ಪ್ರತಿ.